ಖುಲಿ ಖಾನ್ ಹಿದಾಯತ್ ಎಂಬ ಕವಿ ಅವಳ ಹಾಗೂ ಅವಳ ಪ್ರಿಯಕರನ ನಡುವಿನ ಅಮರಪ್ರೇಮವನ್ನು ಕುರಿತು 'ಬಕ್ತಾನ್ ಮೇಹ್' ಎಂಬ ದೀರ್ಘ ಕಾವ್ಯವನ್ನು ಬರೆದ. ಪರ್ಶಿಯನ್ ಹಾಗೂ ಅರೇಬಿಕ್ ಎರಡೂ ಭಾಷೆಯಲ್ಲೂ ಬರೆದ ರಾಬಿಯಾಳ ಕಾವ್ಯ ಸುಮಾರು ಮುನ್ನೂರು ವರ್ಷಗಳ ನಂತರ ರೂಮಿ ಎಂದು ವಿಶ್ವ ಪ್ರಸಿದ್ಧನಾಗಿರುವ ಜಲಾಲುದ್ದೀನ್ ಮೊಹಮ್ಮದ್ ಬಲ್ಖಿಯ ಕಾವ್ಯಕ್ಕೆ ಮಾತ್ರವಲ್ಲ, ಒಟ್ಟು ಪರ್ಶಿಯನ್ ಸಾಹಿತ್ಯಕ್ಕೆ ಮೂಲ ಪ್ರೇರಣೆಯಾಯಿತು ಎಂದು ವಿದ್ವಾಂಸರು ಉಲ್ಲೇಖಿಸುತ್ತಾರೆ. ವಿಶೇಷವೆಂದರೆ ರಾಬಿಯಾ ಮತ್ತು ರೂಮಿ ಇಬ್ಬರೂ ಬಲ್ಖ್ ಪ್ರಾಂತ್ಯದಿಂದ ಬಂದವರೇ.

ವಿಚಿತ್ರವೆಂದರೆ, ಇವತ್ತಿಗೂ ನೂರಾರು ಯುವಕ ಯುವತಿಯರು ತಮ್ಮ ಪ್ರೇಮದೇವತೆಯೆಂದು ಭಾವಿಸಿ ರಾಬಿಯಾಳ ಗೋರಿಗೆ ಭೇಟಿ ನೀಡುತ್ತಾರೆ. ಆಫ್ಘಾನಿಸ್ತಾನದ ಹಲವು ವಿಶ್ವವಿದ್ಯಾನಿಲಯಗಳು, ದೊಡ್ಡ ದೊಡ್ಡ ಕಾಲೇಜು, ಸ್ಕೂಲುಗಳು, ಆಸ್ಪತ್ರೆಗಳು, ರಸ್ತೆಗಳು ಆಕೆಯ ಹೆಸರನ್ನು ಹೊತ್ತಿವೆ. ಆಕೆಯ ಹೆಸರನ್ನು ಅಫ್ಘಾನಿಸ್ತಾನ ಮಾತ್ರವಲ್ಲ, ಇರಾನ್, ಪಾಕಿಸ್ತಾನಗಳಲ್ಲಿ ಹೆಣ್ಣಿನ ಅಸಾಧಾರಣ ಶಕ್ತಿಯ ರೂಪದಲ್ಲಿ ಜನ ನೆನಪಿಸಿಕೊಳ್ಳುತ್ತಾರೆ. ಇಷ್ಟೊಂದು ಸಾಹಿತ್ಯಿಕ ಸಾಂಸ್ಕೃತಿಕ ಮನ್ನಣೆ ಗಳಿಸಿಕೊಂಡರೂ ಆಕೆಯ ಕಾವ್ಯ ಇಡಿಯಾಗಿ ದೊರಕುವುದಿಲ್ಲ. ಕಾವ್ಯವಿರಲಿ, ತಾಲಿಬಾನಿಗಳ ಅಟಾಟೋಪದ ಈಚಿನ ದಿನಗಳಲ್ಲಿ ಆಕೆಯ ಗೋರಿಗೆ ಜನರಿಗೆ ಸುಲಭವಾಗಿ ಭೇಟಿ ನೀಡುವುದೂ ದುಸ್ತರವಾಗಿದೆ.

ಬಲ್ಖ್ ಪ್ರಾಂತ್ಯದಲ್ಲಿ ಹುಟ್ಟಿದ ರಾಬಿಯಾ ಬಲ್ಖಿಯಳನ್ನು ಪರ್ಶಿಯನ್ ಭಾಷೆಯಲ್ಲಿ ಮೊದಲು ಬರೆದ ಇರಾನಿನ, ಇಂದು ಆಫ್ಘಾನಿಸ್ತಾನದ ಮೊದಲ ಕವಿಯೆಂದು ಗುರುತಿಸಲಾಗುತ್ತಿದೆ. ಆಕೆಯನ್ನು ಇಸ್ಲಾಮಿಕ್ ಪ್ರಪಂಚದ ಮೊದಲ ಕವಿಯೆಂದೂ ಪರಿಗಣಿಸುತ್ತಾರೆ. ಆಕೆಯ ತಂದೆ ಇರಾನಿನ ಸಮಾನಿದ್ ವಂಶಕ್ಕೆ ಸೇರಿದ ಅಮೀರ್ ನಸ್ರ್ ಚಕ್ರವರ್ತಿಯ ಅಸ್ಥಾನದಲ್ಲಿ ಮುಖ್ಯ ಅಧಿಕಾರಿಯಾಗಿದ್ದ. ಕಲೆ-ಕಾವ್ಯಗಳ ಪೋಷಕನಾಗಿದ್ದ ಅಮೀರ್ ನಸ್ರ್ ತನ್ನ ಅರಮನೆಯಲ್ಲಿ ಕವಿಗೋಷ್ಠಿಗಳನ್ನು, ಕವಿಸನ್ಮಾನಗಳನ್ನು ನಿಯಮಿತವಾಗಿ ಏರ್ಪಡಿಸುತ್ತಿದ್ದ. ಅಲ್ಲಿನ ಗೋಷ್ಠಿಗಳಲ್ಲಿ ಹಾಜರಿರುತ್ತಿದ್ದ ರಾಬಿಯಾಳ ತಂದೆ ಇಂಥ ಕೂಟಗಳಿಗೆ ತನ್ನ ಮಗಳನ್ನು ಕರೆದೊಯ್ಯುತ್ತಿದ್ದ. ಆ ಕೂಟಗಳಲ್ಲಿ ಕವಿಗಳು ಓದುವ ಕಾವ್ಯವನ್ನು, ಅದರ ಬಗ್ಗೆ ನಡೆಯುತ್ತಿದ್ದ ಉತ್ಸಾಹಭರಿತ ಚರ್ಚೆಗಳಲ್ಲಿ ಒಡನಾಡಿ ರಾಬಿಯಾಳಿಗೆ ಪರ್ಶಿಯನ್ ಭಾಷೆಯಲ್ಲಿ ಕವಿತೆ ಬರೆಯುವ ಅಸಕ್ತಿ ಹುಟ್ಟಿತು. ಕವಿತೆಯಷ್ಟೇ ಅಲ್ಲ, ಆಕೆ ಚಿತ್ರಕಲೆ, ಕುದುರೆ ಸವಾರಿ, ಕತ್ತಿವರಸೆಗಳಲ್ಲಿಯೂ ಬಹಳ ಪರಿಣತಿಯನ್ನು ಹೊಂದಿದ್ದಳು. ಒಂದು ದಂತಕತೆಯ ಪ್ರಕಾರ, ಸೋಲುತ್ತಿರುವ ಯುದ್ಧವೊಂದಕ್ಕೆ ನುಗ್ಗಿದ ರಾಬಿಯಾ ತನ್ನ ಪ್ರಿಯಕರನನ್ನು ವೈರಿಗಳಿಂದ ರಕ್ಷಿಸಿ ಎದೆಗವುಚಿಕೊಂಡು ಬಂದಿದ್ದಳು. ಅದೇ ಅವರಿಬ್ಬರ ನಡುವಿನ ಪ್ರೇಮಕ್ಕೆ ನಾಂದಿಯಾಯಿತು.

ಕವಿಗಳ ಸಮಾವೇಶವೊಂದರಲ್ಲಿ ಅರಮನೆಯ ಮೇಲುಮಹಡಿಯಲ್ಲಿ ಒಂದು ಸಂಜೆ ಬಹಳ ಗಹನವಾದ ಚರ್ಚೆ ನಡೆಯುತ್ತಿತ್ತು. ದೊಡ್ಡವರ ಮಾತುಗಳನ್ನು ದೂರದಿಂದಲೇ ಕೇಳಿಸಿಕೊಳ್ಳುತ್ತಿದ್ದ ರಾಬಿಯಾಳಿಗೆ ಬಹಳ ನಂಬುಗೆಯ ಭಟನಂತೆ, ಪ್ರಾಮಾಣಿಕನಂತೆ, ಮಹಲಿನ ಕೆಳಗೆ ಅಮಾಯಕನಾಗಿ ಒಬ್ಬನೇ ನಿಂತಿದ್ದ ಗುಲಾಮ ಬಕ್ತಾಶ್‌ನನ್ನು ಕಂಡು ಮನಕರಗಿತು. ಮಹಲುಗಳ ಮೇಲಿಂದ ಕೆಳಗಿಳಿದ ಕ್ಷಣದಿಂದಲೇ ಅವಳ ಪ್ರೇಮ ಹಾಗೂ ಕಾವ್ಯಗಳೆರಡೂ ದುರಂತದ ಕೊರಕಲಿಗೆ ಮುಗ್ಗರಿಸಿಬಿಟ್ಟವು.

ಬಕ್ತಾಶ್ ಟರ್ಕಿಯ ಗುಲಾಮನಾಗಿದ್ದು, ರಾಜನ ಅಸ್ಥಾನದಲ್ಲಿ ಸೇವಕನಾಗಿದ್ದ. ಯಾವ ತರತಮವನ್ನೂ ನೋಡದ ರಾಬಿಯಾಳ ಪ್ರೇಮ ಹಾಗೂ ಕಾವ್ಯಗಳೆರಡೂ ಅವನನ್ನು ಆತ್ಮಸಖನನ್ನಾಗಿ ಸ್ವೀಕರಿಸಿಬಿಟ್ಟವು. ಆಫ್ಘಾನಿಸ್ತಾನದ ಜನರ ಬಾಯಲ್ಲಿ ಹರಿದಾಡುವ ದಂತಕತೆಗಳಲ್ಲಿ- ಹಲವು ಕವಿಗಳು ಬರೆದ ತಜ್ಕಿರಾ ಹಾಗೂ ಮಸ್ನವಿಗಳಲ್ಲಿ- ಅವರಿಬ್ಬರ ಪ್ರೇಮವನ್ನು ಕೇವಲ ಗಂಡು ಹೆಣ್ಣಿನ ಸಂಬಂಧವನ್ನಾಗಿ ನೋಡಿಲ್ಲ. ಸೂಫಿ ಪರಂಪರೆಯ ನಂಬಿಕೆಗಳಿಗೆ ಅನುಗುಣವಾಗಿ ಆಕೆ ಬಕ್ತಾಶ್‌ನಲ್ಲಿ ಕೇವಲ ಗಂಡಸೊಬ್ಬನನ್ನು ಮಾತ್ರ ಕಾಣಲಿಲ್ಲ. ಅವನ ಮೂಲಕ ದೇವರನ್ನು ಕಂಡುಕೊಂಡಳು. ಅದಕ್ಕಾಗಿಯೇ ಆಕೆಗಾದ ಕ್ರೂರ ಅನ್ಯಾಯದ ಹೊರತಾಗಿಯೂ ಕೊನೆಯಲ್ಲಿ ಆಕೆಯ ಮನಸ್ಸು ನಿರ್ಮಲವಾಗಿಯೇ ಉಳಿದಿತ್ತು ಎಂದು ಫರೀದುದ್ದೀನ್ ಅತ್ತರ್‌ನಂಥ ಕವಿಗಳು ಹಾಗೂ